**OS. No.55/2022** **PW – 1**

ಪ್ರಮಾಣೀಕರಿಸಲಾದ ದಿನಾಂಕಃ **05.07.2025.**

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. **TGV** ವಕೀಲರಿಂದಃ</u>

ಯರೆಕಟ್ಟೆ ಗ್ರಾಮದಲ್ಲಿ 2 ನೇ ವಾದಿಯ ಹೆಸರಿನಲ್ಲಿ ಒಂದು ಮನೆ ಇದೆ ಎಂದರೆ ಸರಿ. ಸದರಿ ಸ್ವತ್ತು ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಅದು ಅವರ ಗಂಡನ ಸ್ವಯಾರ್ಜಿತ ಸ್ವತ್ತು ಎಂದು ನುಡಿದಿರುತ್ತಾರೆ. ನನ್ನ ಇಬ್ಬರು ಗಂಡು ಮಕ್ಕಳ ಪಾಲನೆ ಪೋಷಣೆ ಜವಾಬ್ದಾರಿ ನನ್ನದೇ ಆಗಿರುತ್ತದೆ ಎಂದರೆ ಸರಿ. ನಾನು ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿದ ನಂತರ ನನ್ನ ಕುಟುಂಬದ ನಿರ್ವಹಣೆ ನಾನೆ ಮಾಡುತ್ತಿದ್ದೆ ಎಂದರೆ ಸರಿ. 1997 ರಲ್ಲಿ 2 ನೇ ವಾದಿಯ ವಿವಾಹವನ್ನು ನೆರವೇರಿಸಿರುತ್ತೇನೆ ಎಂದರೆ ಅವರ ವಿವಾಹ 1995 ರಲ್ಲಿ ನಡೆದಿದ್ದು ಸಾಧಾರಣವಾಗಿ ತಾಳಿ ಕಟ್ಟುವ ಶಾಸ್ತ್ರದಿಂದ ಮುಗಿದಿರುತ್ತದೆ. ಬೆಳಗುಲಿ ಗ್ರಾಮದಲ್ಲಿ ಎರಡು ಸ್ವತ್ತುಗಳು ಮತ್ತು ಸಂಪಿಗೆ ಗ್ರಾಮದಲ್ಲಿ ಕೊಂಡಿರುವ ಸಂಬಂಧ ಆದಾಯ ಮೂಲ ದಾಖಲೆಗಳು ಅಗತ್ಯವಿದ್ದಲ್ಲಿ ಒದಗಿಸುತ್ತೇನೆ. 2 ನೇ ವಾದಿ ಯರೆಕಟ್ಟೆಯಲ್ಲಿ 3 ಸ್ವತ್ತುಗಳನ್ನು ಕೊಂಡಿರುವ ಬಗ್ಗೆ ಆದಾಯದ ಮೂಲ ದಾಖಲೆಗಳು ಅವರೇ ಒದಗಿಸುತ್ತಾರೆ.

ನಾನು ವಿವಾಹದ ನಂತರ 1992-93 ನೇ ಸಾಲಿನಲ್ಲಿ ಟಿ ಸಿ ಹೆಚ್ ವ್ಯಾಸಂಗ ಮಾಡಿರುತ್ತೇನೆ ಎಂದರೆ ಸರಿ. ನಾನು ವ್ಯಾಸಂಗ ಮಾಡಲು ಮತ್ತು ಕೆಲಸಕ್ಕೆ ಹೋಗಲು ನನ್ನ ಗಂಡನಿಂದ ವಿರೋಧ ಇತ್ತು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅವರು ತುಂಬಾ ಬಡವರಾಗಿದ್ದರು. ನನ್ನ ಟಿ ಸಿ ಹೆಚ್ ವಿದ್ಯಾಭ್ಯಾಸ ಮತ್ತು ಕೆಲಸ ಕೊಡಿಸಿದ್ದು ನನ್ನ ತಂದೆ ಎಂದರೆ ಸರಿಯಲ್ಲ. ಸಂಪಿಗೆ ಗ್ರಾಮದಲ್ಲಿ ಇರುವ ಜಮೀನನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ಸಂಪಿಗೆಯಲ್ಲಿ ಜಮೀನು ನೋಡಿಕೊಳ್ಳಲು ನಾನೇ ಒಂದು ರೂಮ್ ಮಾಡಿಕೊಂಡು ಹೋಗಿ ಬಂದು ಮಾಡುತ್ತಿದ್ದೆ. ನನ್ನ ತಾಯಿ ಅಲ್ಲೇ ವಾಸವಿದ್ದರು ಎಂದರೆ ಸರಿ. ಅಲ್ಲಿ ಜಮೀನಿನ ಅಕ್ಕ-ಪಕ್ಕದವರೊಂದಿಗೆ ಜಗಳವಾಡಿಕೊಂಡು ತಾಯಿಯನ್ನು ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿಯನ್ನು ನನ್ನ ಹಿಡಿತದಲ್ಲಿ ಹಿಡಿದುಕೊಂಡಿದ್ದೆ ಎಂದರೆ ಇಲ್ಲಿ ತೊಂದರೆಯಾದ ನನ್ನ ಬಳಿ ಬರುತ್ತಿದ್ದರು.

2007 ನೇ ಇಸವಿಯಲ್ಲಿ ನನ್ನ ಮತ್ತು ನನ್ನ ಮಗ ಹರ್ಷನ ವಿರುದ್ಧ ಬೆಂಗಳೂರು ಆರ್.ಟಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ಆಗ ನನ್ನ ಮಗ ಹರ್ಷ ಮನೆ ಬಿಟ್ಟು ಹೋಗಿರುತ್ತಾರೆ ಎಂದರೆ ಕೆಲಸಕ್ಕಾಗಿ ಹೋಗಿರುತ್ತಾರೆ. ಆತ ಮನೆ ಬಿಟ್ಟು ಹೋಗಲು 1 ನೇ ಪ್ರತಿವಾದಿ ಕಾರಣ ಎಂದು ಚಿನಾಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು

ದಾಖಲು ಮಾಡಿರುತ್ತೇನೆ ಎಂದರೆ ಆಸ್ತಿ ಸಂಬಂಧ ಮೌಖಿಕವಾಗಿ ದೂರು ಕೊಟ್ಟಿರುತ್ತೇನೆ. ಸದರಿ ವಿಚಾರವಾಗಿ ನನಗೂ ಮತ್ತು 1 ನೇ ಪ್ರತಿವಾದಿಗೂ 15 ವರ್ಷಗಳಿಂದ ವೈಷಮ್ಯ ಎಂದರೆ ಸರಿಯಲ್ಲ. ಹಂದನಕೆರೆ ಪೊಲೀಸ್ ಠಾಣಾ ವ್ಯಾಪ್ತಿಯಡಿಯಲ್ಲಿ ನಾನು ಮತ್ತು ನನ್ನ ತಂಗಿ 1 ನೇ ಪ್ರತಿವಾದಿಯ ವಿರುದ್ಧ ಮತ್ತು 1 ನೇ ಪ್ರತಿವಾದಿ ನಮ್ಮ ವಿರುದ್ಧ ದೂರು ದಾಖಲಾಗಿದ್ದು ಪ್ರಕರಣಗಳು ಚಾಲ್ತಿಯಲ್ಲಿ ಇರುತ್ತವೆ ಎಂದರೆ ನಾನು ದೂರು ದಾಖಲಿಸಿದ್ದು ನನ್ನ ತಂಗಿ ದಾಖಲಿಸಿದ್ದು ಪ್ರಕರಣಗಳು ಚಾಲ್ತಿಯಲ್ಲಿ ಇರುತ್ತದೆ.

2006-07 ರಿಂದ ಇವತ್ತಿನವರೆಗೂ 2 ನೇ ವಾದಿ ಯರೆಕಟ್ಟೆಯಲ್ಲಿ ವಾಸ ಎಂದರೆ ಸ್ವಲ್ಪ ದಿನ ಇದ್ದರು ಊರಿಗೆ ಹೋಗಿ ಬಂದು ಮಾಡುತ್ತಿದ್ದಾರೆ. ಈಗ್ಗೆ ಕೋವಿಡ್ ಸಮಯದಿಂದ ಯರೆಕಟ್ಟೆ ತೋಟದ ಮನೆಯಲ್ಲಿ ವಾಸವಿದ್ದು ಹೋಗಿ ಬಂದು ಮಾಡುತ್ತಿದ್ದಾರೆ. 1 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಅಲ್ಲ ನಮಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)

ಓ.ಹೇ.ಕೇ.ಸರಿ ಇದೆ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ